**ಮಧ್ಯಂತರ ಅರ್ಜಿ ಆದೇಶ ಸಂಖ್ಯೆ-4 ದಿನಾಂಕ 07-02-2025 ರ ಆದೇಶದ ಮೇರೆಗೆ ಸಾಕ್ಷಿಗೆ ದಿನಾಂಕ 07-02-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಎಸ್.ಎ.ಕೆ. ಅರ್ಜಿದಾರರ ಪರ ವಕೀಲರಿಂದಃ**

ನನ್ನ ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-33 ಎಂದು ಗುರುತಿಸಲಾಯಿತು.

ಎಕ್ಸ್ ರೇ ವರದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-34 ಎಂದು ಗುರುತಿಸಲಾಯಿತು.

ಎಕ್ಸ್ ರೇ ಚಿತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-35 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ VCMP 2ನೇ ಎದುರುದಾರರ ಪರ ವಕೀಲರಿಂದ**

ನಾನು ಗ್ಯಾಸ್ ಏಜೆನ್ಸಿಯಲ್ಲಿ ಡೆಲಿವರಿ ಬಾಯ್ ಅಂತಾ ಕೆಲಸ ಮಾಡುತ್ತಿದ್ದ. ನಾನು ಕಲ್ಬುರ್ಗಿಯಲ್ಲಿರುವ ಬಿ ನಾಗೇಶರವರ ಗ್ಯಾಸ್ ಏಜೇನ್ಸಿಯಲ್ಲಿ 6 ವರ್ಷಗಳಿಂದ ಕೆಲಸ ಮಾಡುತ್ತಿದ್ದೆ. ನಾನು ಸದರಿ ಗ್ಯಾಸ್ ಏಜೆನ್ಸಿಯಲ್ಲಿ ಡೆಲಿವರಿ ಬಾಯ್ ಅಂತಾ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲೆ ಇದೆ ಆದರೆ ಅದನ್ನು ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ಡೆಲಿವರಿ ಬಾಯ್ ಕಾರ್ಡ್ ಇದೆ ಎಂದು ನುಡಿಯುತ್ತಾರೆ. ನನಗೆ ಸದರಿ ಗ್ಯಾಸ್ ಏಜೆನ್ಸಿಯವರು ಮಾಸಿಕ 18 ಸಾವಿರ ಸಂಬಳ ನೀಡುತ್ತಿದ್ದರು. ನನಗೆ ಸಂಬಳವನ್ನು ನಗದು ರೂಪದಲ್ಲಿ ಕೈಗೆ ನೀಡುತ್ತಿದ್ದರು ಆದರೆ ಬ್ಯಾಂಕ್ ಖಾತೆಗೆ ಹಾಕುತ್ತಿದ್ದಿಲ್ಲ. ಗ್ಯಾಸ್ ಏಜೆನ್ಸಿಯಲ್ಲಿ

ಸಾಕಷ್ಟು ಕಾರ್ಮಿಕರು ಕೆಲಸ ಮಾಡುವ ಕಾರಣ ಗ್ಯಾಸ್ ಏಜೆನ್ಸಿಯವರು ತಮ್ಮ ಏಜೆನ್ಸಿಯಲ್ಲಿ ಹಾಜರಿ ಪುಸ್ತಕ ಇಟ್ಟು ಕಾರ್ಮಿಕರ ಖಾತೆಗೆ ಸಂಬಳ ಹಾಕುತ್ತಾರೆ ಅಂದರೆ ಸರಿಯಲ್ಲ. ಸಾಮಾನ್ಯವಾಗಿ ಗ್ಯಾಸ್ ಏಜೆನ್ಸಿಯವರು ಕಾರ್ಮಿಕರಿಗೆ ವಿಮೆ ಮಾಡಿಸುತ್ತಾರೆಂದರೆ ನಿಜ. ನಾನು ಸದರಿ ವಿಮೆ ದಾಖಲಾತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ನಾನು ಗ್ಯಾಸ್ ಏಜೆನ್ಸಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ ನನಗೆ 18 ಸಾವಿರ ಸಂಬಳ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಗ್ಯಾಸ್ ಏಜೆನ್ಸಿಯಲ್ಲಿ ಕೆಲಸ ಮಾಡುತಿದ್ದ ಬಗ್ಗೆ ಹಾಗೂ ನನಗೆ 18 ಸಾವಿರ ಸಂಬಳ ಇದ್ದ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ.

ಅಪಘಾತದ ಸಮಯದಲ್ಲಿ ನನಗೆ 35 ವರ್ಷ ವಯಸ್ಸಸಾಗಿತ್ತು. ಪುನಃ ಸಾಕ್ಷಿ 34 ವರ್ಷ ವಯಸ್ಸಾಗಿತ್ತು ಎಂದು ನುಡಿಯುತ್ತಾರೆ. ನನಗೆ 34 ವರ್ಷ ವಯಸ್ಸು ಅಂತಾ ತೋರಿಸಲು ನಾನು ಆಧಾರ್ ಕಾರ್ಡ್ ಸಲ್ಲಿಸಿರುತ್ತೇನೆ. ನನಗೆ ಅಪಘಾತದ ಸಮಯದಲ್ಲಿ 45 ವರ್ಷಕ್ಕಿಂತ ಹೆಚ್ಚಿ ಗೆ ವಯಸ್ಸಾಗಿತ್ತು 34 ವರ್ಷ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ಸಮಯದಲ್ಲಿ ನಾನು ಜನಿವಾರ ಗ್ರಾಮದಿಂದ ಜೇವರ್ಗಿ ಕಡೆಗೆ ಬರುತ್ತಿದ್ದೆ. ಅಪಘಾತದ ಸಮಯದಲ್ಲಿ ನಾನು ಮತ್ತು ನನ್ನ ಹೆಂಡತಿ ಇದ್ದೆವು. ದಿನಾಂಕ 16-06-2022 ರಂದು ಅಪಘಾತ ಆಗಿರುತ್ತದೆ.

ಅಪಘಾತವು ಜೇವರ್ಗಿಯ ಬಸ್ ನಿಲ್ದಾಣದ ಬಳಿ ಆಗಿರುತ್ತದೆ. ನಾನು ಜೇವರ್ಗಿಯ ಬಸ್ ನಿಲ್ದಾಣದ ಬಳಿ ನಿಂತಿದ್ದಾಗ ದ್ವಿ-ಚಕ್ರ ವಾಹನ ಬಂದು ಡಿಕ್ಕಿಪಡಿಸಿದ ಕಾರಣ ಅಪಘಾತವಾಗಿರುತ್ತದೆ. ಅಪಘಾತವಾದಾಗ ಸಮಯ 10-10 ರಿಂದ 10-30 ಗಂಟೆ ಆಗಿತ್ತು. ಅಪಘಾತದಲ್ಲಿ ನನಗಷ್ಟೆ ಗಾಯ ಆಗಿರುತ್ತದೆ ನನ್ನ ಹೆಂಡತಿಗೆ ಗಾಯವಾಗಿಲ್ಲ.

ಅಪಘಾತವಾದಾಗ ನನಗೆ ಪ್ರಜ್ಞೆ ಇರಲಿಲ್ಲ. ನನ್ನ ಹೆಂಡತಿಗೆ ಪ್ರಜ್ಞೆ ಇತ್ತು. ಅಪಘಾತದ ನಂತರ ಮೊದಲಿಗೆ ನಾವು ಕುರಾಳ ಆಸ್ಪತ್ರ್ಗೆ ಹೋಗಿರುತ್ತೇವೆ. ಕುರಾಳ ಆಸ್ಪತ್ರೆಯಲ್ಲಿ ನಾನು 8 ದಿನಗಳವರೆಗೆ ಇದ್ದೆ. ಪೊಲೀಸರಿಗೆ ದೂರನ್ನು ನನ್ನ ಹೆಂಡತಿ ನೀಡಿರುತ್ತಾಳೆ. ಅಪಘಾತವಾದ 25 ದಿನಗಳ ನಂತರ ನನ್ನ ಹೆಂಡತಿ ದೂರು ನೀಡಿರುತ್ತಾಳೆ. ನಾನು ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ದೂರನ್ನು ಸಲ್ಲಿಸಿರುತ್ತಾರೆ. ಆಸ್ಪತ್ರೆಯಲ್ಲಿ ಅಪಘಾತ ಹೇಗೆ ಆಗಿರುತ್ತದೆ ಅಂತಾ ಬರೆದುಕೊಂಡಿರುತ್ತಾರೆ. ಆಸ್ಪತ್ರೆಯವರು ಬರೆದುಕೊಂಡ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ.

ಇದು ಅಪಘಾತ ಪ್ರಕರಣ ಆಗಿದ್ದಲ್ಲಿ ವೈದ್ಯರು ಪ್ರಕರಣವನ್ನು RTA ಅಂತಾ ಪರಿಗಣಿಸಿ ಸಂಬಂಧಪಟ್ಟ ಪೊಲೀಸ್ ಠಾಣೆಗೆ MLC ಮಾಹಿತಿ ನೀಡುತ್ತಿದ್ದರು ಎಂದರೆ ಸಾಕ್ಷಿ ವೈದ್ಯರು ಅಪಘಾತ ಹೇಗೆ ಆಗಿರುತ್ತದೆ ಅಂತಾ ಕೇಳಿರುತ್ತಾರೆ ನಾನು ಯಾವ ರೀತಿ ಆಗಿರುತ್ತದೆ ಅಂತಾ ಹೇಳಿರುತ್ತೇನೆ.

ಆ ದಿನ ಅಪಘಾತವಾದ ಬಗ್ಗೆ MLC ದಾಖಲಾತಿ ಇಲ್ಲ ಎಂದರೆ ಸರಿಯಲ್ಲ. ನನಗೆ ಆದಂತಹ ಗಾಯಗಳು ಅಪಘಾತದಲ್ಲಿ ಆದ ಗಾಯಗಳಲ್ಲ ಆದ್ದರಿಂದ ವೈದ್ಯರು MLC ಮಾಹಿತಿ ದಾಖಲಾತಿ ಕಳುಹಿಸಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ದ್ವಿ-ಚಕ್ರ ವಾಹನದ ಚಾಲಕ ಅಪಘಾತಪಡಿಸಿ ಸ್ವಲ್ಪ ಮುಂದೆ ಹೋಗಿ ನಿಲ್ಲಿಸಿ ನಂತರ ವಾಹನ ಸಮೇತ ಓಡಿಹೋಗಿರುತ್ತಾನೆಂದು ನಮೂದು ಇದೆ ಎಂದರೆ ನಿಜ. ದ್ವಿ-ಚಕ್ರ ವಾಹನದ ಚಾಲಕನ ತಪ್ಪಿ ನಿಂದ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಅಪಘಾತವಾಗಿರದೇ ಇದ್ದರೂ ಸಹ ನಾನು, ಪೊಲೀಸರು, ನಮ್ಮ ಮನೆಯವರು ಕೂಡಿಕೊಂಡು 24 ದಿನಗಳವರಗೆ ಸಮಯ ತೆಗೆದುಕೊಂಡು ಸದರಿ ವಾಹನವನ್ನು ಪ್ರಕರಣದಲ್ಲಿ ಸೇರಿಸಿರುತ್ತೇವೆಂದರೆ ಸರಿಯಲ್ಲ. ನಾನೇ ವಾಹನದ ಮೇಲಿನಿಂದ ಬಿದ್ದು ಗಾಯಮಾಡಿಕೊಂಡು ದ್ವಿ-ಚಕ್ರ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಕಾಲಿಗೆ ಗಾಯವಾಗಿದೆ.

ಅಪಘಾತವಾಗಿ 3 ವರ್ಷಗಳಾಗಿವೆ. ನನ್ನ ಕಾಲಿನಲ್ಲಿ ಹಾಕಿರುವ ರಾಡ್ ಇನ್ನೂ ಇದೆ. ಕುರಾಳ ಆಸ್ಪತ್ರೆಯಲ್ಲಿ ಹೊರತುಪಡಿಸಿ ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲವೆ ಎಂದರೆ ಸಾಕ್ಷಿ ಆಯುರ್ವೇದ ಚಿಕಿತ್ಸೆ ಪಡೆದಿರುವುದಾಗಿ ನುಡಿಯುತ್ತಾರೆ. ಸುಮಾರು ಎರಡೂವರೆ ಲಕ್ಷದವರೆಗೆ ನನಗೆ ಖರ್ಚಾಗಿರುತ್ತದೆ. ಸಾಮಾನ್ಯವಾಗಿ ಆಸ್ಪತ್ರೆಯಲ್ಲಿ ರೋಗಿ ಸಂಖ್ಯೆ ಬರೆದು ಎಲ್ಲಾ ಬಿಲ್ಲುಗಳನ್ನು ಕೊಡುತ್ತಾರೆಂದರೆ ಹಾಗೂ ನಿಪಿ-9 ಮತ್ತು 10 ರ ದಾಖಲಾತಿಯಲ್ಲಿ ರೋಗಿ ಸಂಖ್ಯೆ ಬರೆದಿಲ್ಲ ಎಂದರೆ ಸರಿಯಲ್ಲ. ನಿಪಿ-9 ಮತ್ತು 10 ದಾಖಾಲಾತಿಗಳು ನೈಜ ಆಸ್ಪತ್ರೆಯ ಬಿಲ್ಲುಗಳಲ್ಲ ಎಂದರೆ ಸರಿಯಲ್ಲ. ನಿಪಿ-9 ಮತ್ತು 10 ರ ದಾಖಲಾತಿಗಳನ್ನು ನಮಗೆ ಬೇಕಾದ ಹಾಗೆ ಬರೆಸಿಕೊಂಡು ಬಂದು ಹಾಜರುಪಡಿಸಿರುತ್ತೇವೆಂದರೆ ಸರಿಯಲ್ಲ. ನಿಪಿ-9 ಮತ್ತು 10ರ ದಾಖಲೆಗಳನ್ನು ಪ್ರಕರಣಕ್ಕೆ ಸಹಾಯವಾಗಲೆಂದು ಹಾಜರುಪಡಿಸಿರುತ್ತೇನೆವೆಂದರೆ ಸರಿಯಲ್ಲ. ಬಿಲ್ಲು ಮತ್ತು ಸಲಹಾ ಚೀಟಿಗಳನ್ನು ಪ್ರಕರಣಕ್ಕೆ ಹಾಜರುಪಡಿಸಿರುತ್ತೇವೆಂದರೆ ಸರಿಯಲ್ಲ. ಅಪಘಾತವಾಗಿ 3 ವರ್ಷಗಳಾದ ಕಾರಣ ನನಗೆ ಗಾಯ ವಾಸಿರುತ್ತವೆ ಎಂದರೆ ಸಾಕ್ಷಿ ಇನ್ನು ಕಾಲಿನಲ್ಲಿ ರಾಡ್ ಇದೆ ಎಂದು ನಡುಯುತ್ತಾರೆ. ನಿಪಿ-33 ರ ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಪ್ರಕರಣಕ್ಕೆ ಅನುಕೂಲವಾಗಲೆಂದು ವೈದ್ಯರಿಂದ ಬರೆಯಿಸಿಕೊಂಡು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಹಾಜರುಪಡಿಸಿದ ಬಿಲ್ಲುಗಳು ಪ್ರಕರಣಕ್ಕೆ ಅನುಕೂಲವಾಗಲೆಂದು ಸೃಷ್ಟಿಸಿಕೊಂಡು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾವು ಕೇಳಿದ ಪರಿಹಾರ ಧನದ ಮೊತ್ತಕ್ಕೆ ಯಾವುದೇ ಆಧಾರ ಇಲ್ಲ ಅಂದಾಜಿನ ಮೇಲೆ ಕೇಳಿರುತ್ತೇವೆಂದರೆ ಸರಿಯಲ್ಲ. ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರು
ಜೇವರ್ಗಿ